

ಅಂದು 2017ರ ಸಪ್ಟೆಂಬರ್ 19ನೇ ದಿನಾಂಕ. ಜಿತೇಂದ್ರ ಓಕ್ಲಹೋಮಾದಲ್ಲಿರುವ ತನ್ನ ಗೆಳೆಯ ವಿಕ್ರಮನ ಮನೆಗೆ ಬಂದು ಅದಾಗಲೇ ಮೂರು ವಾರಗಳಾಗಿದ್ದುವು. ಮನೆಯ ಲಿವಿಂಗ್ ರೂಮ್‌ನಲ್ಲಿ ಕುಳಿತು ಅವನು ಹಸಿರು ಚಹ ಸವಿಯುತ್ತಿದ್ದ. ಟಿವಿಯಲ್ಲಿ ಬಿತ್ತರವಾಗುತ್ತಿದ್ದ ಸುದ್ದಿಸ್ಫೋಟದ ದೃಶ್ಯಾವಳಿ ಅವನ ಗಮನಸೆಳೆಯಿತು. ಅಂದು ಮೆಕ್ಸಿಕೋ ನಗರದ ಪರಿಸರದಲ್ಲಿ ಭೂಮಿತಾಯಿ ಆಕ್ರೋಶದಿಂದ ಸ್ವಲ್ಪ ಹೊತ್ತು ಕಂಪಿಸಿದ ವಿಷಯವಾಗಿತ್ತದು.

'ಏ ವಿಕ್ರಮ್.... ಎಲ್ಲಿದ್ದೀಯೋ? ನೋಡು ಏನು ಅನಾಹುತ ಆಗಿದೆ ಅಂತ...' ಗೆಳೆಯನನ್ನು ಕೂಗಿ ಕರೆದ.

ತನ್ನ ಕೊಠಡಿಯಲ್ಲಿ ಕಂಪ್ಯೂಟರ್ ಮುಂದೆ ಕುಳಿತಿದ್ದ ವಿಕ್ರಮನಿಗೆ ಅದು ಕೇಳಿಸಲಿಲ್ಲ. ಆದರೆ ಅಡುಗೆ ಮನೆಯಲ್ಲಿದ್ದ ಚೈತಾಲಿ ಮತ್ತು ಶ್ವೇತಾ ಇಬ್ಬರೂ ಓಡಿ ಬಂದರು. ಟಿವಿಯಲ್ಲಿ ಪದೇ ಪದೇ ಪ್ರಸಾರವಾಗುತ್ತಿದ್ದ ದೃಶ್ಯಗಳನ್ನು ನೋಡಿ ಸ್ತಂಭೀಭೂತರಾದರು. ಆಗತಾನೇ ಮೆಕ್ಸಿಕೋ ನಗರದಲ್ಲಿ ಮಿಂಚಿನಂತೆ ಬಂದು ಹೋದ ಭೂಕಂಪದ ದೃಶ್ಯಗಳು.... ರಿಕ್ಟರ್ ಮಾಪಕದಲ್ಲಿ 7.1 ಪ್ರಮಾಣದ ಭೂಕಂಪ ಇಪ್ಪತ್ತು ಸೆಕೆಂಡುಗಳ ಕಾಲ ನಗರವನ್ನಿಡೀ ನಡುಗಿಸಿ ಅಲ್ಲೋಲಕಲ್ಲೋಲ ಮಾಡಿತ್ತು. ಏನೋ ಘಟಿಸಬಾರದ್ದು ಸಂಭವಿಸಿದೆ ಎಂಬ ಅನಿಸಿಕೆಯಿಂದ ವಿಕ್ರಮ್ ಕೂಡಾ ತಾನು ಮಾಡುತ್ತಿದ್ದ ಕೆಲಸವನ್ನು ಅರ್ಧದಲ್ಲೇ ನಿಲ್ಲಿಸಿ ಅಲ್ಲಿಗೆ ಬಂದು ಟಿವಿ ಮುಂದೆ ಕುಳಿತ.

'ಎಷ್ಟೊಂದು ಭಯಾನಕ ದೃಶ್ಯಗಳು!' ಉದ್ಗರಿಸಿದಳು ಚೈತಾಲಿ.

'ಈ ಮೆಕ್ಸಿಕೋ ನಗರವಿರುವ ಜಾಗದಲ್ಲಿ ಮೊದಲೊಂದು ಸರೋವರವಿತ್ತು. ಹಾಗಾಗಿ ಅಲ್ಲಿನ ಮಣ್ಣು ತುಂಬಾ ಮೆತ್ತಗಿದೆ, ಜಿತು.. ಭೂಕಂಪ ವಾದಾಗ ಅಲ್ಲಿ ಅಧಿಕ ಹಾನಿ ಉಂಟಾಗತ್ತೆ.'

'ಅದೇ ಮತ್ತೆ, ನೆಲದೊಳಗಿನ ಟೆಕ್ಟಾನಿಕ್ ಪ್ಲೇಟುಗಳು ಅಲ್ಲಾಡಿದಾಗ ಮೆತ್ತಗಿರುವ ಮಣ್ಣಿಗೆ ತನ್ನ ಮೇಲಿರುವ ಭಾರವನ್ನು ತಡೆಯಲಾಗುವುದಿಲ್ಲ. ವಿಕ್ರಮ್, ಕಟ್ಟಡಗಳೂ ಮರಗಳೂ ಹೇಗೆ ಉರುಳುತ್ತಿವೆ ನೋಡಿದಿಯಾ?'

'ಎಷ್ಟೊಂದು ಪ್ರಾಣಹಾನಿ ಆಯಿತೋ ಏನೋ. ವೈಜ್ಞಾನಿಕವಾಗಿ ಮತ್ತು ಆರ್ಥಿಕವಾಗಿ ನಾವೆಷ್ಟು ಮುಂದುವರಿದರೂ ಪ್ರಕೃತಿಯ ಅಟ್ಟಹಾಸದ ಮುಂದೆ ನಮ್ಮದೇನೂ ನಡೆಯೋದಿಲ್ಲ. ನಾವೆಲ್ಲ ಹುಲುಮಾನವರು ಹಾಗೂ ಅಸಹಾಯಕರು ಎಂಬುದನ್ನು ಭಗವಂತ ಆಗಾಗ ನಮಗೆ ನೆನಪಿಸುತ್ತಿರುತ್ತಾನೆ' ಚೈತಾಲಿಯ ಮಾತುಗಳಲ್ಲಿ ವೇದನೆ ತುಂಬಿತ್ತು.

ಈಗ ವಿಕ್ರಮ್ ಪ್ರತಿಕ್ರಿಯಿಸಿದ 'ಜಿತೂ, ಇಂದಿಗೆ ಸರಿಯಾಗಿ 32 ವರ್ಷಗಳ ಹಿಂದೆ ಅಂದರೆ 1985ರ ಸಪ್ಟೆಂಬರ್ 19ರಂದು ಇದಕ್ಕಿಂತಲೂ ಭೀಕರ ಭೂಕಂಪ ಸಂಭವಿಸಿತ್ತಂತೆ! ಹತ್ತು ಸಾವಿರ ಜನ ಸಮಾಧಿಯಾಗಿದ್ದರಂತೆ!'

'ನೋಡು ವಿಕ್ರಮ್, ಆವಾಗೆಲ್ಲ ಪರಿಹಾರ ಕಾರ್ಯ ಈಗಿನಷ್ಟು ತ್ವರಿತವಾಗಿ ನಡೆಯುತ್ತಿರಲಿಲ್ಲ ಆದ್ದರಿಂದ ಅಷ್ಟೊಂದು ಜನ ದಾರುಣವಾಗಿ ಮಡಿಯುವಂತಾಯ್ತು. ಅಚ್ಚರಿಯೆಂದರೆ ಅಷ್ಟು ವರ್ಷಗಳ ನಂತರ ಇಂದು ಅದೇ ದಿನಾಂಕದಂದೇ ಈ ದುರಂತ ಸಂಭವಿಸಿದೆ. ನಮಗೆ ಆ ಘಟನೆಯನ್ನು ಪುನಃ ನೆನಪಿಸಿದಂತಾಯ್ತು.'

ಟಿವಿ ಪರದೆಯ ಮೇಲೆ ಮೂಡಿ ಬರುತ್ತಿದ್ದ ದೃಶ್ಯಗಳು ಭಯಾನಕವಾಗಿದ್ದುವು. ಅಂಬರಚುಂಬಿ ಕಟ್ಟಡಗಳು ಕುಸಿದು ಬೀಳುತ್ತಿದ್ದುವು. ಗಗನಕ್ಕೆ ಚಾಚಿಕೊಂಡಿದ್ದ ವೃಕ್ಷಗಳು ಧರಾಶಾಯಿ ಯಾಗಿದ್ದುವು. 40ಕ್ಕೂ ಹೆಚ್ಚು ಕಟ್ಟಡಗಳು ಕುಸಿದಿದ್ದು ಅವುಗಳೆಡೆ ಸುಮಾರು ನಾನ್ನೂರು ಜನ ಸಮಾಧಿಯಾಗಿರಬಹುದು, ಆರು ಸಾವಿರ ಜನ ಗಾಯಗೊಂಡಿರಬಹುದು ಎಂಬ ಮಾಹಿತಿ ಟಿವಿಯಲ್ಲಿ ಬಿತ್ತರವಾಗುತ್ತಲೇ ಇತ್ತು.

'ಓ! ಮೆಕ್ಸಿಕೋ ಸರಕಾರ ಕ್ಷಿಪ್ರವಾಗಿ ಪರಿಹಾರ ಕಾರ್ಯ ಆರಂಭ ಮಾಡಿದೆ. ಪಕ್ಕದ ರಾಷ್ಟ್ರಗಳಾದ ಅಮೇರಿಕ, ಕೆನಡಾ ಮಾತ್ರವಲ್ಲದೆ, ದೂರದ ಜಪಾನ್, ಇಸ್ರೇಲ್ ದೇಶಗಳು ಕೂಡ ಸ್ವಯಂಸೇವಕರನ್ನು ಕಳುಹಿಸುತ್ತವಂತೆ...'

ಕಣ್ಣು ಟಿವಿ ಪರದೆಯ ಮೇಲಿದ್ದರೂ, ಯಾವುದೋ ಯೋಚನೆಯಲ್ಲಿ ಮುಳುಗಿದ್ದ ಜಿತೇಂದ್ರನಿಗೆ ವಿಕ್ರಮನ ಮಾತುಗಳು ಕೇಳಿಸಲಿಲ್ಲ.

'ಜಿತೂ, ಏನು ಯೋಚನೆ ಮಾಡ್ತಾ ಇದೀಯಾ?'

ಅರೆಕ್ಷಣ ಬಿಟ್ಟು ಜಿತೇಂದ್ರ ನುಡಿದ 'ವಿಕ್ರಮ್ ನಾವೂ ಹೋಗೋಣ್ವೇನು, ಸ್ವಯಂಸೇವಕರಾಗಿ? ಅಲ್ಲಿ ನರಳುತ್ತಿರುವ ಜನಕ್ಕೆ ನಮ್ಮ ಅಳಿಲ ಸೇವೆ ಸಲ್ಲಿಸೋಣವೆ?'

'ಖಂಡಿತ ಹೋಗೋಣ ಜಿತು. ಆದರೆ ನನ್ನ ಈಗಿನ ಪ್ರಾಜೆಕ್ಟ್ ಇದೆ ನೋಡು, ಅದನ್ನು ಮುಗಿಸದೆ ಹೊರಡುವ ಹಾಗಿಲ್ಲ. ಅದು ಶುಕ್ರವಾರ ಮುಗಿಯುತ್ತೆ. ಇವತ್ತಿನ್ನೂ ಮಂಗಳವಾರ. ಆದಷ್ಟು ಬೇಗ ದೊರೆಯುವ ಫ್ಲೈಟ್‌ಗೇ ನೀನು ಹೊರಟುಬಿಡು. ನಾನು ಶನಿವಾರ ಅಲ್ಲಿಗೆ ಬಂದ್ಬಿಡ್ತೀನಿ, ಆಗ್ಬಹುದಾ?'

'ಸರಿ ಕಣೋ. ನಿನ್ನ ಟಾರ್ಗೆಟ್ ಮುಗೀಲಿ. ನಾನು ಇವತ್ತೇ ಹೊರಡ್ತೀನಿ. ಶುಕ್ರವಾರ ಸಾಯಂಕಾಲ ನೀನೂ ಬಂದ್ಬಿಡು.'

ಮೆಕ್ಸಿಕೋ ನಗರಕ್ಕೆ ಹೋಗುವ ವಿಮಾನಗಳಲ್ಲಿ ಕೆಲವು ರದ್ದಾಗಿದ್ದುದರಿಂದ ಆ ದಿನ ಜಿತೇಂದ್ರನಿಗೆ ಹೊರಡಲು ಸಾಧ್ಯವಾಗಲಿಲ್ಲ. ಮರುದಿನ ಬೆಳಗಿನ ಜಾವ ಹೊರಡುವ ವಿಮಾನದಲ್ಲಿ ಟಿಕೆಟ್ ಸಿಕ್ಕಿತು. ರಾತ್ರೆ ಮಲಗಿದ ಜಿತೇಂದ್ರನಿಗೆ ನಿದ್ದೆಯೇ ಹತ್ತದು.... ಏನೇನೋ ಯೋಚನೆಗಳು...ಅರ್ಥಂಬರ್ಥ ಕನಸುಗಳು....

ತಾನೂ ಪ್ರಕೃತಿಯ ವಿಕೋಪಕ್ಕೆ ಹೆದರಿಯೇ ಇಲ್ಲಿಗೆ ಬಂದು ಗೆಳೆಯನ ಮನೆ ಸೇರಿದುದಲ್ಲವೇ? ಅದು ಭೂಕಂಪ ಅಲ್ಲ; ಚಂಡಮಾರುತ ನಿಸರ್ಗದ ಅಟ್ಟಹಾಸವೇ ಇನ್ನೊಂದು ರೀತಿಯದು ಅಷ್ಟೆ. ಅಲ್ಲೇ ಇರುತ್ತಿದ್ದರೆ, ತಾನೂ ಸಂಸಾರ ಸಮೇತ ಜಲಸಮಾಧಿ ಯಾಗುತ್ತಿದ್ದೆ. ಅಸಹಾಯಕನಾಗಿ ತಾನು ಓಕ್ಲಹೋಮಾ ಸೇರುವಂತೆ ಮಾಡಿದ ಆ ರುದ್ರಭೀಕರ